**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**C.C. - 22-22** **ಪಿಡಬ್ಲ್ಯೂ ಃ** **<u>10</u>**

**ಸಿಡಬ್ಲ್ಯೂ ಃ** **<u>15</u>**

ಸಾಕ್ಷಿದಾರರ ಹೆಸರು ಃ ಮಹಮ್ಮದ ಯೂನುಸ್ ಅನ್ಸಾರಿ

ತಂದೆ ಹೆಸರು ಃ ಜಹಾಂಗೀರಸಾಬ

ವಯಸ್ಸು ಃ 29 ವರ್ಷ

ಉದ್ಯೋಗ ಃ ಚಾಲಕ

ವಾಸಸ್ಥಳ ಃ ಹಳ್ಳಿಕೇರಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಚಾಲಕ ಎಲ್ಲರ ಕಡೆಗೆ ಕೆಲಸ ಮಾಡುತ್ತೇನೆ. ಆರೋಪಿ ನನಗೆ ಪರಿಚಯವಿಲ್ಲ. 2 ನೇ ಆರೋಪಿ ಪರಿಚಯವಿಲ್ಲ. ಈ ಕೇಸಿನ ಬಗ್ಗೆ ಮಾಹಿತಿ ಇಲ್ಲ, ಪೋಲಿಸರು ವಿಚಾರಣೆ ಮಾಡಿಲ್ಲ, ನಾನು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದರು, ಅವರ ಮನವಿಯನ್ನು ಪರಿಗಣಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 28.9.2021 ರಂದು ನನ್ನ ಸಹೋದರನಾದ ನ್ಯಾಯಾಲಯದ ಮುಂದಿರುವ ಆರೋಪಿ ಮಃ 2.30 ಗಂಟೆಗೆ ಯಾವುದೇ ಚಾಲನಾ ಪತ್ರ ಹೊಂದದೆ ಟಿಪ್ಪರ ನಂಃ ಕೆಎ-25/ಎಎ-3504 ನೇದ್ದನ್ನು ಹುಬ್ಬಳ್ಳಿ - ಗದಗ ರೋಡಿನ ಅಂಡರ ಬ್ರಿಜ್ ಕಡೆಗೆ ಪಿಂಟೋ ಸರ್ಕಲ್ ಕಡೆಗೆ ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು, ಅದೇ ಮಾರ್ಗವಾಗಿ ಹೊರಟಿದ್ದ ಒಂದು ಬೈಕ್ ನಂಃ ಕೆಎ-25 / ಇಎಲ್ - 1788 ನೇದ್ದಕ್ಕೆ ಹಿಂದಿನಿಂದ ಡಿಕ್ಕಿಪಡಿಸಿ, ಮುಂದೆ ಕುಳಿತಿದ್ದ ಜೈಸನ್ ಎಂಬ ಮಗುವಿಗೆ ಗಾಯವಾಗುವಂತೆ ಹಾಗೂ ಬೈಕನ್ನು ಚಲಾಯಿಸುತ್ತಿದ್ದ, ಶೇಷಮ್ ಮ್ಯಾತ್ಯೂ ಇವರಿಗೆ ಗಂಭೀರ ಗಾಯಗೊಂಡು, ಆಸ್ಪತ್ರೆಯಲ್ಲಿ ಉಪಚಾರ ಫಲಿಸದೇ, ಮರಣ ಹೊಂದುವಂತೆ ಅಪಘಾತ ಪಡಿಸಿದ್ದನು ಅಂದರೆ ಸರಿಯಲ್ಲ.

ಸ್ಥಳದಲ್ಲಿದ್ದ ಜನರು ಹಾಗೂ ಪೋಲಿಸರು ಆರೋಪಿಯನ್ನು ಸ್ಥಳದಲ್ಲಿ ವಿಚಾರಣೆ ಮಾಡಿದಾಗ ತನ್ನ ನಿಜ ಹೆಸರನ್ನು ಹೇಳಲು ನನ್ನ ಹೆಸರನ್ನು ತನ್ನ ಹೆಸರು ಎಂದು ಹೇಳಿದ ವಿಷಯ ನನಗೆ ಪೋಲಿಸರಿಂದ ಗೊತ್ತಾಗಿದೆ ಅಂದರೆ ಸರಿಯಲ್ಲ. ಆರೋಪಿಯ ಸುಳ್ಳನ್ನು ತಿಳಿದು, ನಾನು ಪೋಲಿಸರಿಗೆ ಈಗ ನನಗೆ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ.20 ಎಂದು ಗುರುತಿಸಲಾಯಿತು. ನಿಪಿ.20 ರಂತೆ ಹೇಳಿಕೆ ನೀಡಿದ್ದರಿಂದ ಆರೋಪಿ ನನ್ನ ಸೋದರ ಸಂಬಂಧಿಯಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.